# ಕುವೆಂಪು ವಿಶ್ವವಿದ್ಯಾಲಯ

## *ವಿಶೇಷ ಸಿಂಡಿಕೇಟ್ ಸಭೆಯ*

## ನಡಾವಳಿಗಳು

## ಸಭಾ ದಿನಾಂಕ : 16–01–2023

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262 ☎ 08282-256148 (ಪ್ರಾಧಿಕಾರಗಳ ವಿಭಾಗ)
ಇ-ಮೇಲ್:drsyndicateku@gmail.com ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-I-ಸಿಂ-01/ 513 /:2022-23 ದಿನಾಂಕ:16-02-2023
24-02-2023

ಮಾನ್ಯರೆ,

ವಿಷಯ: ದಿನಾಂಕ:16-01-2023ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ – 2000ರ ಪ್ರಕರಣ – 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:16-01-2023 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಭವನದಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ-IIIರ ಪ್ರಕರಣ – 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

**ಪ್ರತಿಗಳು:**

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:16-01-2023 ರಂದು ಸೋಮವಾರ ಪೂರ್ವಾಹ್ನ :11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ನವೀನ್‌ಕುಮಾರ್ ಎಸ್.ಕೆ, ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ಓಂ ಪ್ರಕಾಶ್ ರಾಜೋಳೆ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ (ಆನ್ ಲೈನ್ ಮೂಲಕ) | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ(ಆನ್ ಲೈನ್ ಮೂಲಕ) | ಸದಸ್ಯರು |
| 7. | ಪ್ರೊ. ರಿಯಾಜ್ ಮಹಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 8. | ಶ್ರೀ ವಿನಯ್‌ಕುಮಾರ್ ಶೆಟ್ಟಿ, ಪ್ರಾಂಶುಪಾಲರು, | ಸದಸ್ಯರು |
| 9. | ಡಾ. ಎ.ಟಿ.ಪದ್ಮೇಗೌಡ., ಪ್ರಾಂಶುಪಾಲರು, | ಸದಸ್ಯರು |
| 10. | ಡಾ. ಎಂ. ಸ್ವಾಮಿ., ಪ್ರಾಂಶುಪಾಲರು, | ಸದಸ್ಯರು |
| 11. | ಶ್ರೀಮತಿ ಸೀಮಾ ಕೌಸರ್ ಹೆಚ್., ಪ್ರಾಂಶುಪಾಲರು(ಆನ್ ಲೈನ್ ಮೂಲಕ) | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು.

ಮಾನ್ಯ ಕುಲಪತಿಗಳು ಕಾಲೇಜು ಶಿಕ್ಷಣ ಇಲಾಖೆಯ ನೂತನ ಪ್ರಾದೇಶಿಕ ಜಂಟಿ ನಿರ್ದೇಶಕರಾಗಿ ನೇಮಕಗೊಂಡು ಸಭೆಗೆ ಆಗಮಿಸಿದ ಪ್ರೊ: ಓಂಪ್ರಕಾಶ್ ರಾಜೋಳೆ, ಇವರನ್ನು ಸ್ವಾಗತಿಸಿದರು ಮತ್ತು ನೂತನವಾಗಿ ಆಯ್ಕೆಗೊಂಡ ಮಾನ್ಯ ಪ್ರಾಂಶುಪಾಲ ಸದಸ್ಯರುಗಳಾದ ಶ್ರೀ ವಿನಯ್ ಕುಮಾರ್ ಶೆಟ್ಟಿ, ಡಾ:ಎ.ಟಿ.ಪದ್ಮೇಗೌಡ, ಡಾ: ಎಂ.ಸ್ವಾಮಿ ಮತ್ತು ಶ್ರೀಮತಿ ಸೀಮಾ ಕೌಸರ್ ಹೆಚ್. ಇವರುಗಳನ್ನು ಮತ್ತು ಆನ್ ಲೈನ್ ಮೂಲಕ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿರುವ ಮಾನ್ಯ ಸದಸ್ಯರುಗಳಾದ ಶ್ರೀ ಬಿ. ನಿರಂಜನ ಮೂರ್ತಿ, ಶ್ರೀ ಎನ್. ಆರ್. ಮಂಜುನಾಥ್ ಮತ್ತು ಶ್ರೀಮತಿ ಸೀಮಾ ಕೌಸರ್ ಹಾಗೂ ಉಳಿದ ಎಲ್ಲಾ ಸದಸ್ಯರುಗಳನ್ನು ಮತ್ತೊಮ್ಮೆ ಸ್ವಾಗತಿಸಿದರು ಮತ್ತು ವಿಶ್ವವಿದ್ಯಾಲಯದ ಸರ್ವಾಂಗೀಣ ಅಭಿವೃದ್ಧಿ ಕಾರ್ಯದಲ್ಲಿ ಸಕ್ರಿಯವಾಗಿ ಕೈ ಜೋಡಿಸುವಂತೆ ಮತ್ತು ಸಿಂಡಿಕೇಟ್‌ನ ಕಾರ್ಯಾವಧಿಯಲ್ಲಿ ಅಮೂಲ್ಯ ಸಲಹೆಗಳನ್ನು ನೀಡುವಂತೆ ಕೋರಿದರು. ನಂತರ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಮಾನ್ಯ ಕುಲಪತಿಗಳು ಇತ್ತೀಚೆಗೆ ವಾರಾಣಸಿಯಲ್ಲಿ ನಡೆದ ಅಖಿಲ ಭಾರತ ಕುಲಪತಿಗಳ ಸಮ್ಮೇಳನವನ್ನು ಉಲ್ಲೇಖಿಸುತ್ತಾ, ಯಾವುದೇ ವಿಶ್ವವಿದ್ಯಾಲಯಗಳು ಶೈಕ್ಷಣಿಕ ಶ್ರೇಷ್ಠತೆಯನ್ನು ಮೆರೆಯಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಕಾರ್ಯ ಪ್ರವೃತ್ತರಾಗಬೇಕೆಂದರು. ಒಂದು ವರದಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯ ಶೇ.24 %ರಷ್ಟು ಮಾತ್ರ ಜನರಿಗೆ ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿದೆ ಎಂದರಲ್ಲದೇ, ಭಾರತದ 100ನೇ ಸ್ವಾತಂತ್ರ್ಯೋತ್ಸವ ವರ್ಷದಲ್ಲಿ ಉನ್ನತ ಶಿಕ್ಷಣ ಪಡೆಯುವ ಪ್ರಮಾಣ ಶೇ. 24ರಿಂದ ಶೇ.50ಕ್ಕೆ ಹೆಚ್ಚಿಸಬೇಕೆಂದರು. ಆ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ಚಿಂತನೆ ನಡೆಸಬೇಕೆಂದರು. ಮಲೆನಾಡಿನ ಅಂದರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಯುವ ಜನತೆಯ ಭವಿಷ್ಯದ ಅವಶ್ಯಕತೆಗಳನ್ನು ಪೂರೈಸುವಂತಹ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಅವಶ್ಯಕತೆಯನ್ನು ವಿವರಿಸಿದರು. ಈ ದಿಸೆಯಲ್ಲಿ ಮಾನ್ಯ ಸಿಂಡಿಕೇಟ್ ಸದಸ್ಯರುಗಳ ಪಾತ್ರ ಹಿರಿದಾಗಿರುತ್ತದೆ ಎಂದರು.

ನಂತರ, ಪ್ರಸಕ್ತ ವಿಶೇಷ ಸಿಂಡಿಕೇಟ್ ಸಭೆಯನ್ನು ಆಯೋಜಿಸಿರುವ ಔಚಿತ್ಯವನ್ನು ವಿವರಿಸಿದರು. ಹತ್ತು ವರ್ಷಗಳ ಹಿಂದೆ, ವಿಶ್ವವಿದ್ಯಾಲಯದ ವಿವಿಧ ಹುದ್ದೆಗಳಿಗೆ ಉನ್ನತೀಕರಣದ ಮೂಲಕ ನೀಡಲಾದ ಬಡ್ತಿ ಆದೇಶಗಳನ್ನು ಮಾನ್ಯ ಸಿಂಡಿಕೇಟ್ ಸಭೆಯ ಗಮನಕ್ಕೆ ತಾರದೇ, ಪೂರ್ವ ಭಾವಿ ಸಿದ್ಧತೆಯಿಲ್ಲದೆ ಏಕ ಪಕ್ಷೀಯವಾಗಿ ಈ ಹಿಂದಿನ ಕುಲಸಚಿವರು ರದ್ದುಪಡಿಸಿರುವ ಕ್ರಮದಿಂದಾಗಿ ವಿಶ್ವವಿದ್ಯಾಲಯದ ಅಧ್ಯಾಪಕೇತರ ನೌಕರರ ಮಾಸಿಕ ವೇತನ ಪಾವತಿ ಪ್ರಕ್ರಿಯೆ ವಿಳಂಬವಾಗಿ ಅನಾನುಕೂಲ ಉಂಟಾಗಿದೆ. ಆದ್ದರಿಂದ, ಈ ಬಗ್ಗೆ ಒಂದು ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಗತ್ಯವಿದೆಯೆಂಬುದನ್ನು ಸಭೆಗೆ ಸ್ಪಷ್ಟಪಡಿಸಿದರು.

ನಂತರ, ಕಾರ್ಯಸೂಚಿಯಂತೆ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

**ವಿಷಯ ಸಂಖ್ಯೆ: ಸಿಂ-01:2022-23** ಉನ್ನತೀಕರಣದ ಮೂಲಕ ಬಡ್ತಿ ಹೊಂದಿರುವ ವಿಶ್ವವಿದ್ಯಾಲಯ ಸಿಬ್ಬಂದಿಗಳ ಹಿಂಬಡ್ತಿ ಆದೇಶ, ವೇತನ ಪಾವತಿ ಹಾಗೂ ಉನ್ನತೀಕರಣ ಪರಿನಿಯಮ ಕುರಿತು.

ಕುಲಸಚಿವರು(ಪ್ರಭಾರ)ರಾದ **ಪ್ರೊ: ನವೀನ್ ಕುಮಾರ್ ಎಸ್.ಕೆ.** ಇವರು ಮಾತನಾಡುತ್ತಾ, 2012ರಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕೇತರ ನೌಕರರುಗಳಿಗೆ ಹುದ್ದೆಗಳ ಉನ್ನತೀಕರಣದ ಮೂಲಕವಿವಿಧ ಹುದ್ದೆಗಳಲ್ಲಿ ಬಡ್ತಿ ನೀಡಲಾಗಿದ್ದು, ಸದರಿ ಬಡ್ತಿ ಆದೇಶಗಳನ್ನು ಈ ಹಿಂದಿನ ಕುಲಸಚಿವರು ಪೂರ್ವ ಭಾವಿ ಸಿದ್ಧತೆಯಿಲ್ಲದೆ ಮತ್ತು ಸಿಂಡಿಕೇಟ್ ಸಭೆಯ ಗಮನಕ್ಕೆ ತಾರದೇ ಏಕ ಪಕ್ಷೀಯವಾಗಿ ರದ್ದುಪಡಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ಮುಂದುವರಿಯುತ್ತಾ, ಈ ವಿಷಯದ ಬಗ್ಗೆ ಈ ಹಿಂದಿನ ಸಿಂಡಿಕೇಟ್ ಸಭೆಗಳಲ್ಲೂ ಸಹ ಸಾಕಷ್ಟು ಚರ್ಚೆಯಾಗಿದ್ದು, ಸರ್ಕಾರದಿಂದ ಉನ್ನತೀಕರಣದ ಪರಿನಿಯಮ ಅನುಮೋದನೆಯಾಗಿ ಬರುವವರೆಗೂ ಹಿಂಬಡ್ತಿ / ವೇತನ ವಸೂಲಾತಿ ಪ್ರಕ್ರಿಯೆಗಳನ್ನು ಕೈಗೊಳ್ಳದೇ ವೇತನವನ್ನು ನೌಕರರಿಗೆ ಯಥಾ ರೀತಿ ಮುಂದುವರಿಸಬೇಕೆಂದು ನಿರ್ಣಯವಾಗಿರುವುದನ್ನು ಸಭೆಯ ಗಮನಕ್ಕೆ ತಂದರು.

**ಶ್ರೀ ನಿರಂಜನ ಮೂರ್ತಿ–** ಇವರು ಮಾತನಾಡುತ್ತಾ, ಹಿಂದಿನ ಕುಲಸಚಿವರು ಯಾವ ಆಧಾರದ ಮೇಲೆ ಬಡ್ತಿ ಆದೇಶಗಳನ್ನು ರದ್ದುಪಡಿಸಲಾಗಿದೆ ಎಂದು ಮತ್ತು ಇಂತಹ ಪ್ರಕ್ರಿಯೆ ಕೈಗೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಲಾಗಿದೆಯೇ? ಎಂದು ಪ್ರಶ್ನಿಸಿದರು.

ಕುಲಸಚಿವರು ಉತ್ತರಿಸುತ್ತಾ, 2012ರಲ್ಲಿ ನೀಡಲಾದ ಬಡ್ತಿ ಆದೇಶಗಳನ್ನು ಸಿಂಡಿಕೇಟ್‌ಗೆ ವಿಷಯವನ್ನು ಮಂಡಿಸದೇ ಏಕಪಕ್ಷೀಯವಾಗಿ ಹಿಂದಿನ ಕುಲಸಚಿವರು ರದ್ದುಪಡಿಸಿರುತ್ತಾರೆಂದು ವಿವರಿಸಿದರು.

**ಶ್ರೀ ನಿರಂಜನ ಮೂರ್ತಿ–** ಇವರು ಮಾತನಾಡುತ್ತಾ, ಹೀಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯದೇ ನೌಕರರ ಬಡ್ತಿ ಆದೇಶಗಳನ್ನು ರದ್ದುಪಡಿಸಿದರೆ ನೌಕರರ ಜೀವನ ನಿರ್ವಹಣೆ

ಹೇಗಾಗುತ್ತದೆ ಎಂದು ಪ್ರಶ್ನಿಸಿದರಲ್ಲದೆ, ಇದರಿಂದ ವಿಶ್ವವಿದ್ಯಾಲಯಕ್ಕೆ ಅನವಶ್ಯಕವಾಗಿ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ರದ್ದುಪಡಿಸಲಾದ ಆದೇಶವನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದರು.

**ಕುಲಸಚಿವರು** ಉತ್ತರಿಸುತ್ತಾ, ನೌಕರರಿಗೆ ತೊಂದರೆ ಉಂಟಾಗಬಾರದೆಂಬ ದೃಷ್ಟಿಯಿಂದ ಕೆಲವು ಷರತ್ತುಗಳಿಗೊಳಪಟ್ಟು ವೇತನವನ್ನು ಪಾವತಿಸುವಂತೆ ಬಿಲ್ಲನ್ನು ಸಿದ್ಧಪಡಿಸಿ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಸಲ್ಲಿಸಲಾಗಿದೆಯೆಂದರು. ಅಲ್ಲದೇ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಕುಲಸಚಿವರು ವಕೀಲರಿಂದ ಕೇವಿಯಟ್ ಪಡೆಯುವ ಪ್ರಕ್ರಿಯೆಯನ್ನೂ ಸಹ ನಡೆಸಿದ್ದು ಈ ಪ್ರಕ್ರಿಯೆಗೆ ಮಾನ್ಯ ಕುಲಪತಿಗಳಿಂದಾಗಲೀ ಅಥವಾ ಸಿಂಡಿಕೇಟ್ ಸಭೆಯಿಂದಾಗಲೀ ಅನುಮತಿ ಪಡೆಯದೇ ತರಾತುರಿಯಲ್ಲಿ ಏಕಪಕ್ಷೀಯವಾಗಿ ನಿರ್ಣಯ ತೆಗೆದುಕೊಂಡಿರುತ್ತಾರೆಂದು ಸಭೆಗೆ ವಿವರಿಸಿದರು.
ಜೊತೆಗೆ ಈಗ 2012 ರಿಂದ ಉನ್ನತೀಕರಣದ ಮೂಲಕ ಬಡ್ತಿಗಳನ್ನು ಹಿಂಪಡೆಯಬೇಕಾದಲ್ಲಿ, ಹಿಂಬಡ್ತಿಯ ಪ್ರಕ್ರಿಯೆಯ ಜೊತೆಗೇ ಕಾಲಕಾಲಕ್ಕೆ ವಿವಿಧ ಹುದ್ದೆಗಳಲ್ಲಿ ವಯೋನಿವೃತ್ತಿ / ಮರಣ / ಬಡ್ತಿ / ಸ್ವಯಂ ನಿವೃತ್ತಿ / ರಾಜಿನಾಮೆ ಮುಂತಾದ ಕಾರಣಗಳಿಂದ ತೆರವಾದ ಹುದ್ದೆಗಳಿಗೆ ಜ್ಯೇಷ್ಠತೆ ಮತ್ತು ಅರ್ಹತೆ ಅನುಸಾರ ಮುಂಬಡ್ತಿಗೆ ಕಾಲಕಾಲಕ್ಕೆ ಪರಿಗಣಿಸುವ ಪ್ರಕ್ರಿಯೆಯನ್ನು ಜೊತೆಜೊತೆಗೆ ಸಮನಾಂತರವಾಗಿ ನಡೆಸಬೇಕಾಗಿರುತ್ತದೆ. ಇಲ್ಲವಾದಲ್ಲಿ ಸದರಿ ಪ್ರಕ್ರಿಯೆ ಕ್ರಮಬದ್ಧವಾಗುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

**ಶ್ರೀ ಎ.ಟಿ.ಪದ್ಮೇಗೌಡ** – ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯವೇ ನೌಕರರಿಗೆ ಬಡ್ತಿ ನೀಡಿ, ಹತ್ತು ವರ್ಷಗಳ ನಂತರ ಮುಂಬಡ್ತಿ ಆದೇಶಗಳನ್ನು ರದ್ದುಪಡಿಸಿ ಹಿಂಬಡ್ತಿ ನೀಡಲಾದ ಕ್ರಮ ತಪ್ಪು ಎಂದರಲ್ಲದೇ, ಸಿಬ್ಬಂದಿಗಳ ಹಕ್ಕನ್ನು ಕಸಿದುಕೊಂಡಂತಾಗಿದೆ ಎಂದರು. ಆದ್ದರಿಂದ ಸಿಬ್ಬಂದಿಗಳ ಹಕ್ಕನ್ನು ಯಥಾ ಸ್ಥಿತಿಯಲ್ಲಿ ಪ್ರತಿಷ್ಠಾಪಿಸುವುದು ವಿಶ್ವವಿದ್ಯಾಲಯದ ಆದ್ಯ ಕರ್ತವ್ಯವಾಗಬೇಕು ಎಂದರು.
**ಶ್ರೀ ನಿರಂಜನ ಮೂರ್ತಿ–** ಇವರು ಮಾತನಾಡುತ್ತಾ, ಸಿಂಡಿಕೇಟ್ ಸಭೆಯ ನಿರ್ಣಯಕ್ಕೂ ಮಂಡಿಸದೇ ಏಕಪಕ್ಷೀಯವಾಗಿ ಬಡ್ತಿ ಆದೇಶಗಳನ್ನು ರದ್ದುಪಡಿಸಿರುವ ಕ್ರಮ ಅಕ್ಷಮ್ಯ ಅಪರಾಧ ಎಂದು ಪುನರುಚ್ಚರಿಸುತ್ತಾ, ವಿಶ್ವವಿದ್ಯಾಲಯದಲ್ಲಿನ ಅರಾಜಕತೆಗೆ ಹಿಂದಿನ ಕುಲಸಚಿವರು ಕಾರಣರಾಗಿದ್ದಾರೆಂದು ಬೇಸರ ವ್ಯಕ್ತಪಡಿಸಿದರು. ಹಾಗೂ ಕೇವಿಯೆಟ್ ಪ್ರಕ್ರಿಯೆಗಾಗಿ ಸಿಂಡಿಕೇಟ್ / ಮಾನ್ಯ ಕುಲಪತಿಗಳ ಅನುಮೋದನೆ ಪಡೆಯದೇ ಇರುವುದರಿಂದ ಈ ಪ್ರಕ್ರಿಯೆಗೆ ತಗುಲಿದ ವೆಚ್ಚವನ್ನು ಹಿಂದಿನ ಕುಲಸಚಿವರಿಂದ ವೈಯಕ್ತಿಕವಾಗಿಯೇ ಭರಿಸಿಕೊಳ್ಳಬೇಕೆಂದು ಸಭೆಗೆ ತಿಳಿಸಿದರು.

**ಮಾನ್ಯ ಕುಲಪತಿಗಳು ಮಾತನಾಡುತ್ತಾ,** ಹಿಂದಿನ ಕುಲಸಚಿವರು ನೌಕರರ ಉನ್ನತೀಕರಣದ ಪರಿನಿಯಮದ ಪ್ರಸ್ತಾವನೆಗೆ ಸರ್ಕಾರದ ಮಟ್ಟದಲ್ಲಿ ಅನುಮೋದನೆ ದೊರಕಿಸಿಕೊಡುವುದಾಗಿ ತಿಳಿಸಿ ಕಡತದಲ್ಲಿ ಅನುಮೋದನೆ ಪಡೆದು ಸದರಿ ಅನುಮೋದನೆಯನ್ನು ದುರುಪಯೋಗ ಪಡಿಸಿಕೊಂಡು ಬಡ್ತಿ ರದ್ದತಿಗೆ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಸಭೆಗೆ ವಿವರಿಸಿದರು. ವಿಷಯ ತಿಳಿದ ನಂತರ ಸದರಿ ಕಡತವನ್ನು ಪರಿಶೀಲನೆಗಾಗಿ ಮೌಖಿಕವಾಗಿ ಮತ್ತು ಲಿಖಿತವಾಗಿ ಕೋರಿದರೂ ಸಹ ಕಡತವನ್ನು ಸಲ್ಲಿಸದಿರುವುದು ದ್ವೇಷದ ಆಡಳಿತ ಎಂದರು. ಕೇವಿಯೆಟ್‌ಗೆ ಸಿಂಡಿಕೇಟ್ ಹಾಗೂ ಕುಲಪತಿಗಳ ಅನುಮೋದನೆ ಪಡೆಯದೇ ಇರುವುದರಿಂದ ಸದರಿ ಪ್ರಕ್ರಿಯೆಯ ವೆಚ್ಚವನ್ನು ವಿಶ್ವವಿದ್ಯಾಲಯವು ಭರಿಸುವುದು ಸೂಕ್ತವಲ್ಲವೆಂದರಲ್ಲದೇ, ಸದರಿ ವೆಚ್ಚವನ್ನು ಇಂತಹ ಪ್ರಮಾದಕ್ಕೆ ಕಾರಣರಾದ ಹಿಂದಿನ ಕುಲಸಚಿವರಿಂದಲೇ ವೈಯಕ್ತಿಕವಾಗಿ ಭರಿಸುವುದು ಸೂಕ್ತವೆಂದರು.

**ಪ್ರೊ: ಎಂ.ಸ್ವಾಮಿ–** ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಅಭಿವೃದ್ಧಿಯಲ್ಲಿ ಅಧ್ಯಾಪಕೇತರ ನೌಕರರ ಪಾತ್ರ ಬಹು ಮುಖ್ಯವಾಗಿರುತ್ತದೆ. ಆದ್ದರಿಂದ, ಅಂತಹವರಿಗೆ ಪದೋನ್ನತಿ ಇಲ್ಲದಿದ್ದಾಗ ನೌಕರರಲ್ಲಿ ಅನಗತ್ಯ ಅಸಮಾಧಾನ ಮೂಡುವುದು ಸಹಜ. ಕಾಲ ಕಾಲಕ್ಕೆ ಅವರುಗಳಿಗೆ ಬಡ್ತಿ

ಸೌಲಭ್ಯ ನೀಡಿದಲ್ಲಿ ಅವರನ್ನು ಪ್ರೋತ್ಸಾಹಿಸಿದಂತಾಗಿ ಅವರಿಂದಾಗಿ ಇನ್ನೂ ಹೆಚ್ಚಿನ ಉತ್ತಮ ಕಾರ್ಯ ನಿರ್ವಹಣೆಯನ್ನು ನಿರೀಕ್ಷಿಸಬಹುದಾಗಿರುತ್ತದೆ. ಆದ್ದರಿಂದ, ಈ ವಿಷಯದಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಬೇಕೆಂದರು.

**ಪ್ರೊ: ರಿಯಾಜ್ ಮಹಮೂದ್**– ಇವರು ಮಾತನಾಡುತ್ತಾ, ಪರಿನಿಯಮಗಳಿಗೆ ಸರ್ಕಾರದ ಅನುಮೋದನೆ ಪಡೆಯದೇ, ಅನುಮೋದನೆಯನ್ನು ಕಾಯ್ದಿರಿಸಿ ಬಡ್ತಿ ಪ್ರಕ್ರಿಯೆಗಳನ್ನು ಕೈಗೊಳ್ಳುತ್ತಾ ಬಂದಿರುವುದರಿಂದ ಸಮಸ್ಯೆಗಳನ್ನು ನಾವೇ ಸೃಷ್ಟಿಸಿದಂತಾಗಿದೆ ಎಂದರಲ್ಲದೇ, ಬಡ್ತಿ ನೀಡಲಾದ ಹುದ್ದೆಯಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸಿದ ನೌಕರರಿಗೆ ವೇತನ ನೀಡದಿರುವುದು ವಿಶ್ವವಿದ್ಯಾಲಯವು ಆ ನೌಕರರಿಗೆ ದ್ರೋಹ ಮಾಡಿದಂತಾಗುತ್ತದೆ. ಆದ್ದರಿಂದ, ಆದ್ಯತೆ ಮೇರೆಗೆ ನೌಕರರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪರಿನಿಯಮದ ಅನುಮೋದನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕೆಂದು ಸಲಹೆ ನೀಡಿದರು. ಹೀಗೆ ಮಾಡಿದಲ್ಲಿ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಗುತ್ತದೆಂಬುದನ್ನು ವಿವರಿಸಿದರು.

ಸರ್ಕಾರದ ಪತ್ರ / ಸುತ್ತೋಲೆಗಳನ್ವಯ ಸರ್ಕಾರದ ಪ್ರತಿನಿಧಿಯಾಗಿ ಹಿಂದಿನ ಕುಲಸಚಿವರು ಬಡ್ತಿ ಆದೇಶಗಳ ರದ್ಧತಿಗೆ ಕ್ರಮ ಕೈಗೊಂಡಿರಬಹುದು. ಆದರೂ ಸಹ ಸದರಿ ವಿಷಯವನ್ನು Highest Law Making Body ಯಾದ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಗೆ ಮಂಡಿಸದೇ ಏಕ ಪಕ್ಷೀಯವಾಗಿ ನಿರ್ಣಯ ತೆಗೆದುಕೊಂಡಿದ್ದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದರು.

**ಶ್ರೀ ವಿನಯ್ ಕುಮಾರ್ ಶೆಟ್ಟಿ** – ಇವರು ಮಾತನಾಡುತ್ತಾ, ಸದರಿ ಪ್ರಕರಣವನ್ನು ಮಾನವೀಯತೆ ದೃಷ್ಟಿಯಿಂದ ಪರಿಗಣಿಸಬೇಕೆಂದರು. ಬಡ್ತಿ ರದ್ದತಿಯಂತಹ ದೊಡ್ಡ ನಿರ್ಧಾರ ಕೈಗೊಳ್ಳುವ ಮೊದಲು ಸಿಂಡಿಕೇಟ್ ಸಭೆಯಲ್ಲಿ ಚರ್ಚೆಗೆ ಒಳಪಡಿಸಬೇಕಾಗಿತ್ತು ಎಂದರು.

**ಪ್ರೊ: ಓಂಪ್ರಕಾಶ್ ರಾಜೋಳೆ,** –ಇವರು ಮಾತನಾಡುತ್ತಾ, ಯಾರಿಗೂ ಅನ್ಯಾಯವಾಗದಂತೆ, ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂದು ಸಭೆಗೆ ವಿವರಿಸಿದರು.
ಕುಲಸಚಿವರು ಮಾತನಾಡುತ್ತಾ, ಈ ಎಲ್ಲಾ ಗೊಂದಲಗಳಿಗೆ ಸರ್ಕಾರದಿಂದ ಪರಿನಿಯಮ ಅನುಮೋದನೆಯಾಗದೇ ಇರುವುದು ಕಾರಣ ಎಂದರು.

**ಶ್ರೀ ವಿನಯ್ ಕುಮಾರ್ ಶೆಟ್ಟಿ** – ಇವರು ಸಹಮತ ವ್ಯಕ್ತಪಡಿಸುತ್ತಾ, ಉನ್ನತೀಕರಣದ ಪರಿನಿಯಮಕ್ಕೆ ಶೀಘ್ರ ಅನುಮೋದನೆ ದೊರಕಿಸಿಕೊಳ್ಳಲು ವಿಶ್ವವಿದ್ಯಾಲಯವು ಪ್ರಯತ್ನಿಸಬೇಕೆಂದರು.

**ಪ್ರೊ: ಓಂಪ್ರಕಾಶ್ ರಾಜೋಳೆ,** –ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಯಾವುದಾದರೂ ಒಬ್ಬ ಅಧಿಕಾರಿಗಳು ಸರ್ಕಾರದಿಂದ ಪರಿನಿಯಮದ ಅನುಮೋದನೆ ಪಡೆಯುವುದರ ಬಗ್ಗೆ ಆಸ್ಥೆಯಿಂದ ಉಸ್ತುವಾರಿ ವಹಿಸಬೇಕೆಂದು ಸಲಹೆ ನೀಡಿದರು.

**ಶ್ರೀ ಎನ್ ಆರ್. ಮಂಜುನಾಥ್**– ಇವರು ಮಾತನಾಡುತ್ತಾ, ಹಿಂದಿನ ಕುಲಸಚಿವರು ರದ್ದು ಮಾಡಿದ ಆದೇಶಗಳನ್ನು ಸರಿಯಾಗಿ ಪರಿಶೀಲಿಸಿ ಯಾವ ಆಧಾರದ ಮೇಲೆ ರದ್ದುಪಡಿಸಲಾಗಿದೆ ಮತ್ತು ಈಗ ಹೇಗೆ ಸರಿಪಡಿಸಬೇಕೆಂಬುದರ ಬಗ್ಗೆ ಈಗಿನ ಕುಲಸಚಿವರು ಸಭೆಯಲ್ಲಿ ಸ್ಪಷ್ಟ ನಿರ್ಣಯವನ್ನು ಕೈಗೊಳ್ಳಬೇಕೆಂದರು. ಹಿಂದಿನ ಕುಲಸಚಿವರು ನಿಯಮ ಬಾಹಿರವಾಗಿ ಅಂದರೆ, ಸಿಂಡಿಕೇಟ್‌ನ ಅನುಮೋದನೆ ಪಡೆಯದೇ ಏಕಪಕ್ಷೀಯವಾಗಿ ನಿರ್ಣಯ ಕೈಗೊಂಡಿದ್ದನ್ನು ದಾಖಲಿಸಿ ಹೊಸ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದರು.

**ನಿರ್ಣಯ**

1. ವಿಶ್ವವಿದ್ಯಾಲಯದಲ್ಲಿ ವಿವಿಧ ಹುದ್ದೆಗಳ ಒಟ್ಟು 139 ನೌಕರರ ಬಡ್ತಿಗಳನ್ನು ಹಿಂಪಡೆಯಲು ಮಾಡಲಾದ ಆದೇಶವನ್ನು ಈ ಕೆಳಕಂಡ ಕಾರಣಗಳಿಗಾಗಿ ರದ್ದುಪಡಿಸಲು ನಿರ್ಣಯಿಸಲಾಯಿತು.

ಅ) ವಿಶ್ವವಿದ್ಯಾಲಯದ ಆಗಿನ ಪರಿಸ್ಥಿತಿಗನುಗುಣವಾಗಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಹತ್ತು ವರ್ಷದ ಹಿಂದೆ ಹುದ್ದೆಗಳ ಉನ್ನತೀಕರಣದ ಮೂಲಕ ಬಡ್ತಿ ನೀಡಲು ಕೈಗೊಂಡ ಕ್ರಮವನ್ನು ಹಿಂಪಡೆಯುವ ಮುನ್ನ ನೌಕರರಿಗೆ ನೋಟೀಸ್ ನೀಡಿರುವುದಿಲ್ಲ.

ಆ) ವಿಶ್ವವಿದ್ಯಾಲಯದ ಉನ್ನತ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ವಿಸ್ತೃತ ಚರ್ಚೆಗೆ ಮಂಡಿಸದೆ, ಏಕಪಕ್ಷೀಯವಾಗಿ 139 ನೌಕರರ ಬಡ್ತಿ ಆದೇಶಗಳನ್ನು ರದ್ದು ಪಡಿಸಿ, ಮಾಸಾಂತ್ಯದಲ್ಲಿ ಯಾವೊಬ್ಬ ನೌಕರರಿಗೂ ಸಕಾಲದಲ್ಲಿ ವೇತನ ಪಾವತಿಯಾಗದೇ ನೌಕರರಿಗೆ ಅನಗತ್ಯ ಅಡಚಣೆ ಉಂಟಾಗಿರುತ್ತದೆ.

ಇ) ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್, ಸಿಂಡಿಕೇಟ್ ಹಾಗೂ ಹಣಕಾಸು ಸಮಿತಿಗಳ ಸಭೆಯಲ್ಲಿ ಈಗಾಗಲೇ ವಿಷಯವನ್ನು ಮಂಡಿಸಿ ಸರ್ಕಾರಕ್ಕೆ ಉನ್ನತೀಕರಣದ ಪರಿನಿಯಮವನ್ನು ಅನುಮೋದನೆಗೆ ಸಲ್ಲಿಸಲಾಗಿರುವುದರಿಂದ ವಿಷಯವು ಸರ್ಕಾರದ ಪರಿಶೀಲನಾ ಹಂತದಲ್ಲಿ ಇರುತ್ತದೆ.

ಈ) ಅಲ್ಲದೇ, ದಿನಾಂಕ: 02-06-2022ರ ಸಿಂಡಿಕೇಟ್ ಸಭೆಯಲ್ಲೂ ಸಹ ಈ ಬಗ್ಗೆ ವಿಸ್ತೃತ ಚರ್ಚೆಯಾಗಿ ಸಿಬ್ಬಂದಿಗಳ ವೇತನವನ್ನು ತಡೆಹಿಡಿಯಬಾರದು ಎಂದು ನಿರ್ಣಯವಾಗಿರುತ್ತದೆ.

2. ಎಲ್ಲಾ ಸಿಬ್ಬಂದಿಗಳ ವೇತನ ಪಾವತಿಗೆ ಕೂಡಲೇ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

3. ವಿಶ್ವವಿದ್ಯಾಲಯವೇ ನೀಡಿದ ಬಡ್ತಿಗನುಗುಣವಾಗಿ ಎಲ್ಲಾ ನೌಕರರು ಈಗಾಗಲೇ ಹತ್ತು ವರ್ಷಗಳಿಂದಲೂ ಆಯಾ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ ಆಯಾ ಹುದ್ದೆಗೆ ನಿಗದಿಪಡಿಸಿದ ವೇತನವನ್ನು ಪಡೆದಿರುತ್ತಾರೆ. ಸದರಿ ವೇತನವನ್ನು ಹೆಚ್ಚುವರಿ ವೇತನವೆಂದು ಪರಿಗಣಿಸಿ, ಕಟಾಯಿಸಲು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ (ಸಂಖ್ಯೆ:ಸಿವಿಲ್ ಅಪೀಲು ಸಂಖ್ಯೆ:7115 /2010) ಹಿನ್ನೆಲೆಯಲ್ಲಿ ಅವಕಾಶವಿರುವುದಿಲ್ಲವಾದ್ದರಿಂದ ಪಾವತಿಸಲಾದ ವೇತನದ ವಸೂಲಾತಿ ಕ್ರಮವನ್ನು ಕೈ ಬಿಡಲು ನಿರ್ಣಯಿಸಲಾಯಿತು.

4. ವಿಶ್ವವಿದ್ಯಾಲಯದ ಸಿಂಡಿಕೇಟ್‌ನ ಅನುಮೋದನೆಯನ್ನು ಪಡೆಯದೇ , 139 ನೌಕರರ ಬಡ್ತಿ ಆದೇಶಗಳನ್ನು ರದ್ದುಪಡಿಸಿದ್ದು, ಈ ಸಂಬಂಧ ಉನ್ನತ ಪ್ರಾಧಿಕಾರವಾದ ಸಿಂಡಿಕೇಟ್‌ನಿಂದಾಗಲೀ ಅಥವಾ ಮಾನ್ಯ ಕುಲಪತಿಗಳಿಂದಾಗಲೀ ಅನುಮೋದನೆ ಪಡೆಯದೇ ಹಿಂದಿನ ಕುಲಸಚಿವರಾದ ಶ್ರೀಮತಿ ಅನುರಾಧ ಜಿ., ಕೆ.ಎ.ಎಸ್.(ಸೂಪರ್ ಟೈಮ್ ಸ್ಕೇಲ್), ಇವರು ಕೇವಿಯಟ್ ಪ್ರಕ್ರಿಯೆ ಕೈಗೊಂಡಿರುವ ಹಿನ್ನೆಲೆಯಲ್ಲಿ ಕೇವಿಯಟ್ ಪ್ರಕ್ರಿಯೆಯ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸದಿರಲು ಹಾಗೂ ಸದರಿ ವೆಚ್ಚವನ್ನು ನಿಯಮ ಬಾಹಿರ ಕೇವಿಯಟ್ ಪ್ರಕ್ರಿಯೆ ಕೈಗೊಂಡ ಅಂದಿನ ಕುಲಸಚಿವರೇ ವೈಯಕ್ತಿಕವಾಗಿ ಭರಿಸಬೇಕೆಂದು ನಿರ್ಣಯಿಸಲಾಯಿತು.

5. ವಿಶ್ವವಿದ್ಯಾಲಯದ ನೌಕರರ ಜೀವನ ನಿರ್ವಹಣೆಯ ಹಿತದೃಷ್ಟಿಯಿಂದ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಕೆಲವು ಷರತ್ತುಗಳಿಗೊಳಪಟ್ಟು ಅಧ್ಯಾಪಕೇತರ ನೌಕರರ ವೇತನ ಬಿಲ್ಲನ್ನು ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಸಲ್ಲಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

## ಪ್ರಾಧಿಕಾರಗಳ ವಿಭಾಗ

**ವಿಷಯ ಸಂಖ್ಯೆ: ಸಿಂ–02:2022–23** ಸ್ನಾತಕ/ಸ್ನಾತಕೋತ್ತರ (ಟೂರಿಸಂ & ಟ್ರಾವೆಲ್ ಮ್ಯಾನೇಜ್ಮೆಂಟ್) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ** ಸ್ನಾತಕ/ಸ್ನಾತಕೋತ್ತರ (ಟೂರಿಸಂ & ಟ್ರಾವೆಲ್ ಮ್ಯಾನೇಜ್ಮೆಂಟ್) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. ಹಾಗೂ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ: ಸಿಂ–03:2022–23** ಸ್ನಾತಕೋತ್ತರ ಸೂಕ್ಷ್ಮಾಣುಜೀವಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ** ಸ್ನಾತಕೋತ್ತರ ಸೂಕ್ಷ್ಮಾಣುಜೀವಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. ಹಾಗೂ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ: ಸಿಂ–04:2022–23** ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ** ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. ಹಾಗೂ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ: ಸಿಂ–05:2022–23** ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ** ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. ಹಾಗೂ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ: ಸಿಂ–06:2022–23** ಸ್ನಾತಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ** ಸ್ನಾತಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. ಹಾಗೂ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ: ಸಿಂ–07:2022–23** ಸ್ನಾತಕ ಬಿ.ಬಿ.ಎ.(ಬಿ.ಬಿ.ಎಂ.) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ** ಸ್ನಾತಕ ಬಿ.ಬಿ.ಎ.(ಬಿ.ಬಿ.ಎಂ.) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. ಹಾಗೂ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

## ಪರೀಕ್ಷಾ ವಿಭಾಗ

**ವಿಷಯ ಸಂಖ್ಯೆ: ಸಿಂ–08:2022–23** ಪರೀಕ್ಷಾ ಕಾರ್ಯಗಳಿಗೆ ಎರಡು ವರ್ಷದ ಅವಧಿಗೆ ವಾಹನಗಳನ್ನು ಬಾಡಿಗೆ ಪಡೆಯಲು ಕರೆದಿರುವ ಇ–ಟೆಂಡರ್ ಅನುಮೋದನೆ ಕುರಿತು.

**ನಿರ್ಣಯ** ಪರೀಕ್ಷಾ ಕಾರ್ಯಗಳಿಗೆ ಎರಡು ವರ್ಷದ ಅವಧಿಗೆ ವಾಹನಗಳನ್ನು ಬಾಡಿಗೆ ಪಡೆಯಲು ಕರೆದಿರುವ ಇ–ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

## ಮಾನವ ಸಂಪನ್ಮೂಲ ವಿಭಾಗ

**ವಿಷಯ ಸಂಖ್ಯೆ: ಸಿಂ-09:2022-23** ವೃತ್ತಿ ಪದೋನ್ನತಿ (CAS) ಸಂಬಂಧ BOA/SCREENING CUM EVALUATION COMMITTEE ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ** ವೃತ್ತಿ ಪದೋನ್ನತಿ (CAS) ಸಂಬಂಧ BOA/SCREENING CUM EVALUATION COMMITTEE ನಡಾವಳಿಗಳನ್ನು ಯಥಾವತ್ತಾಗಿ ಅನುಮೋದಿಸಲಾಯಿತು

## ಯುಸಿಸಿಎಫ್ ವಿಭಾಗ

**ವಿಷಯ ಸಂಖ್ಯೆ: ಸಿಂ-10:2022-23** ವಿಶ್ವವಿದ್ಯಾಲಯದಲ್ಲಿನ ಡೆಸ್ಕ್‌ಟಾಪ್ ಮತ್ತು ಲ್ಯಾಪ್‌ಟಾಪ್ ಕಂಪ್ಯೂಟರ್‌ಗಳ ಸಮರ್ಪಕ ನಿರ್ವಹಣೆಗಾಗಿ ಅಗತ್ಯವಿರುವ ಬಿಡಿಭಾಗಗಳನ್ನು ಖರೀದಿಸುತ್ತಿರುವ ಟೆಂಡರ್ ಪ್ರಕ್ರಿಯೆಗೆ ಅನುಮೋದನೆಗಾಗಿ ಮಂಡಿಸುತ್ತಿರುವ ಕುರಿತು.

**ನಿರ್ಣಯ** ವಿಶ್ವವಿದ್ಯಾಲಯದಲ್ಲಿನ ಡೆಸ್ಕ್‌ಟಾಪ್ ಮತ್ತು ಲ್ಯಾಪ್‌ಟಾಪ್ ಕಂಪ್ಯೂಟರ್‌ಗಳ ಸಮರ್ಪಕ ನಿರ್ವಹಣೆಗಾಗಿ ಅಗತ್ಯವಿರುವ ಬಿಡಿಭಾಗಗಳನ್ನು ಖರೀದಿಸುತ್ತಿರುವ ಟೆಂಡರ್ ಪ್ರಕ್ರಿಯೆಗೆ ಸಭೆಯು ಅನುಮೋದಿಸಿತು.

## ಪರೀಕ್ಷಾ ವಿಭಾಗ

**ವಿಷಯ ಸಂಖ್ಯೆ: ಸಿಂ-11:2022-23** Digital Copier ನ್ನು ಖರೀದಿಸಿದ ಮೊತ್ತ ಪಾವತಿಸುವ ಸಂಬಂಧ ಘಟನೋತ್ತರ ಅನುಮೋದನೆ ಕುರಿತು.

**ನಿರ್ಣಯ** Digital Copier ನ್ನು ಖರೀದಿಸಿದ ಮೊತ್ತವನ್ನು ಕಿಯೋನಿಕ್ಸ್ ಸಂಸ್ಥೆ,ಬೆಂಗಳೂರು ಇವರಿಗೆ ಪಾವತಿಸಿರುವ ಕ್ರಮವನ್ನು ಸಭೆ ಅನುಮೋದಿಸಿತು.

**ವಿಷಯ ಸಂಖ್ಯೆ: ಸಿಂ-12:2022-23** ದೋಷ ಪೂರಿತ ಮೌಲ್ಯಮಾಪಕರಿಗೆ ದಂಡ ವಿಧಿಸುವ ಹಾಗೂ ಮರು ಮೌಲ್ಯಮಾಪನ ಮತ್ತು ಸವಾಲಿನ ಮೌಲ್ಯಮಾಪನ ಶುಲ್ಕ ಹಿಂಪಾವತಿ ಕುರಿತ ಸಭೆಯ ನಡಾವಳಿ ಕುರಿತು.

**ಪ್ರೊ: ರಿಯಾಜ್ ಮಹಮೂದ್**- ಇವರು ಮಾತನಾಡುತ್ತಾ ವಿಶ್ವವಿದ್ಯಾಲಯದ ಸ್ನಾತಕ / ಸ್ನಾತಕೋತ್ತರ ಕೋರ್ಸುಗಳ ಮೌಲ್ಯಮಾಪನದಲ್ಲಿ ದೋಷಪೂರಿತ ಮೌಲ್ಯಮಾಪಕರಿಗೆ ದಂಡ ವಿಧಿಸುವ ಬಗ್ಗೆ ರಚಿಸಲಾದ ಸಮಿತಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿರುವುದನ್ನು ಸಭೆಯ ಗಮನಕ್ಕೆ ತಂದರು. ಹಾಗೂ ಸದರಿ ಸಮಿತಿಯ ನಡಾವಳಿಯಲ್ಲಿನ ವಿವರಗಳನ್ನು ಸಭೆಗೆ ವಿವರಿಸಿದರು.

**ಶ್ರೀ ವಿನಯ್ ಕುಮಾರ್ ಶೆಟ್ಟಿ** – ಇವರು ಸಮಿತಿ ಸಭಾ ನಡಾವಳಿಯ ಕ್ರ.ಸಂ.6 ಮತ್ತು 7ಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಾ, ಕಾಲೇಜಿನಲ್ಲಿ UUCMS ತಂತ್ರಾಂಶದಲ್ಲಿ ವಿಭಾಗದ ಮುಖ್ಯಸ್ಥರಿಗೆ ಹಾಜಾರಾತಿಯನ್ನು ದಾಖಲಿಸುವ ಹಾಗೂ ಆಂತರಿಕ ಅಂಕಗಳನ್ನು ದಾಖಲಿಸುವ ಅವಕಾಶ ನೀಡಲಾಗಿದೆ. ಹಾಗೂ ವಿಷಯ / ಪತ್ರಿಕೆಗಳ ಆಯ್ಕೆಯೂ ಕೂಡ ವಿದ್ಯಾರ್ಥಿಗಳ ಹಂತದಲ್ಲಿಯೇ ಇರುವುದರಿಂದ ಈ ಪ್ರಕ್ರಿಯೆಯಲ್ಲಿ ಸಂಸ್ಥೆಯ ತೊಡಗಿಸಿಕೊಳ್ಳುವಿಕೆ ಕಡಿಮೆ ಇದೆ. ಹಾಗೂ ತಂತ್ರಾಂಶದಲ್ಲಿ ಕಾಲೇಜು ಬದಲಾವಣೆ ಅಥವಾ ಕೋರ್ಸ್ / ವಿಷಯದ ಬದಲಾವಣೆಯ ಆಯ್ಕೆಯನ್ನು ಪ್ರವೇಶಾತಿಯ ಸಂದರ್ಭದಲ್ಲಿ ನೀಡುವ ಬದಲಾಗಿ ಶೈಕ್ಷಣಿಕ ವರ್ಷ ಮುಗಿದ ನಂತರ ನೀಡಲಾಗುತ್ತಿದೆ. ಇದರಿಂದಾಗಿ, ಪ್ರಕ್ರಿಯೆ ವಿಳಂಬವಾಗುತ್ತಿದ್ದು ಇದಕ್ಕೆ ಸಂಸ್ಥೆಗೆ ದಂಡ ವಿಧಿಸುವುದು ಬೇಡವೆಂದರು.

**ಡಾ: ಎ.ಟಿ.ಪದ್ಮೇಗೌಡ.** – ಇವರು ಮಾತನಾಡುತ್ತಾ, ಸಂಸ್ಥೆಗಳಿಗೆ ದಂಡ ಹಾಕುವುದು ಬೇಡ. ಆದರೆ, ಕಾಲೇಜುಗಳು ವಿಳಂಬವಾಗಿ ಸಲ್ಲಿಸುವ ಕಾಲೇಜು / ಕೋರ್ಸ್ / ವಿಷಯದ ಬದಲಾವಣೆ / ಆಂತರಿಕ ಅಂಕಗಳ ಸೇರ್ಪಡೆ ಪ್ರಸ್ತಾವನೆಗಳನ್ನು ಪರಿಗಣಿಸಬಾರದೆಂದರು.

**ಪ್ರೊ:** ಎಂ.ಸ್ವಾಮಿ – ಇವರು ಧ್ವನಿಗೂಡಿಸಿ ಸಹಮತ ವ್ಯಕ್ತಪಡಿಸಿದರು.

**ಪ್ರೊ: ರಿಯಾಜ್ ಮಹಮೂದ್** – ಇವರು ಮಾತನಾಡುತ್ತಾ, ಇಂತಹ ಪ್ರಕರಣಗಳಿಗೆ ದಂಡ ವಿಧಿಸುವುದೇ ಮುಖ್ಯ ಉದ್ದೇಶವಾಗಿರುವುದಿಲ್ಲ. ಆದರೆ, ಒಂದು ವ್ಯವಸ್ಥೆ ಸರಿಯಾಗಿ

ನಡೆಯಬೇಕಾದರೆ, ಶಿಸ್ತು ಪಾಲನೆ ಮುಖ್ಯವಾಗುತ್ತದೆ. ಆದ್ದರಿಂದ, ದಂಡದ ಪರಿಕಲ್ಪನೆ ಕೈ ಬಿಡುವುದು ಬೇಡ ಎಂದರು. UUCMS ತಂತ್ರಾಂಶ ಹೊಸದಾಗಿ ಆರಂಭವಾಗಿರುವುದರಿಂದ ಈ ಒಂದು ವರ್ಷ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕಾಲಾವಕಾಶ ನೀಡಿ ಮುಂದಿನ ಶೈಕ್ಷಣಿಕ ವರ್ಷದಿಂದ ದಂಡ ವಿಧಿಸುವ ಪ್ರಕ್ರಿಯೆಯನ್ನು ಅನ್ವಯಿಸಬಹುದು ಎಂದರು.

ಪ್ರಾದೇಶಿಕ ಜಂಟಿ ನಿರ್ದೇಶಕರಾದ ಪ್ರೊ: ಓಂಪ್ರಕಾಶ್ ರವರು ಮಾತನಾಡುತ್ತಾ, Online Valuation ಪದ್ಧತಿಯನ್ನು ಅಳವಡಿಸಿಕೊಂಡರೆ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೆಂದರು.

ಕುಲಸಚಿವರಾದ ಪ್ರೊ: ನವೀನ್‌ಕುಮಾರ್ ಎಸ್.ಕೆ. ಇವರು ಮಾತನಾಡುತ್ತಾ, Online Valuation ಪದ್ಧತಿಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಪ್ರಕ್ರಿಯೆ ಆರಂಭಿಸಲಾಗಿದೆಯೆಂದರು.

**ಶ್ರೀ ಎನ್. ಆರ್. ಮಂಜುನಾಥ್** – ಇವರು ಮಾತನಾಡುತ್ತಾ, ಸ್ನಾತಕ ಕೋರ್ಸುಗಳ ಮೌಲ್ಯಮಾಪನದಲ್ಲಿ Scheme of Valuation ಇರುವುದರಿಂದ ಮೌಲ್ಯಮಾಪನದಲ್ಲಿ ಹೆಚ್ಚಿನ ವ್ಯತ್ಯಾಸವುಂಟಾಗುವುದಿಲ್ಲ. ಆದರೆ, ಸ್ನಾತಕೋತ್ತರ ಕೋರ್ಸುಗಳಲ್ಲಿ Scheme of Valuation ಇಲ್ಲದಿರುವುದರಿಂದ, ಮೌಲ್ಯಮಾಪನದಲ್ಲಿ ವ್ಯತ್ಯಾಸ ಉಂಟಾಗುತ್ತಿದೆ. ಅಲ್ಲದೇ, ಸವಾಲಿನ ಮೌಲ್ಯಮಾಪನ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳ ಸಮ್ಮುಖದಲ್ಲೇ ಕೈಗೊಳ್ಳಬೇಕೆಂದರು. ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಮಾರ್ಗದರ್ಶಿ ಸೂತ್ರಗಳನ್ನು ರಚಿಸಬೇಕೆಂದರು.

ಡಾ: ರಿಯಾಜ್ ಮಹಮೂದ್, ಡಾ: ಎ.ಟಿ. ಪದ್ಮೇಗೌಡ, ಪ್ರೊ:ಎಂ.ಸ್ವಾಮಿ, ಮತ್ತು ಶ್ರೀ ವಿನಯ್ ಕುಮಾರ್ ಶೆಟ್ಟಿ ಮತ್ತಿತರೆ ಸದಸ್ಯರುಗಳು ವಿದ್ಯಾರ್ಥಿಗಳ ಸಮಕ್ಷಮ ಮೌಲ್ಯಮಾಪ ಪ್ರಕ್ರಿಯೆ ಕೈಗೊಳ್ಳುವುದು ಸರಿಯಾದ ಕ್ರಮವಲ್ಲ ಎಂದು ಅಭಿಪ್ರಾಯಪಟ್ಟರು.

ಮಾನ್ಯ ಕುಲಪತಿಗಳು ಉತ್ತರಿಸುತ್ತಾ, ಮೌಲ್ಯಮಾಪನ ಪ್ರಕ್ರಿಯೆಯು ಗೌಪ್ಯವಾಗಿ ನಡೆಯುವಂತಹದ್ದಾಗಿದ್ದು, ವಿದ್ಯಾರ್ಥಿಗಳ ಸಮಕ್ಷಮ ಮೌಲ್ಯಮಾಪ ಪ್ರಕ್ರಿಯೆ ಕೈಗೊಳ್ಳುವುದು ಸರಿಯಾದ ಕ್ರಮವಲ್ಲವೆಂದರು. ಅಲ್ಲದೇ, ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಯ ಛಾಯಾಪ್ರತಿಗಳನ್ನು ಪಡೆಯಲು ಅವಕಾಶವಿದೆ ಎಂದರು.

**ಶ್ರೀ ಎನ್. ಆರ್. ಮಂಜುನಾಥ್** – ಇವರು ಮಾತನಾಡುತ್ತಾ, ಉತ್ತರ ಪತ್ರಿಕೆಯ ಛಾಯಾಪ್ರತಿಯನ್ನಾದರೂ ನೀಡಬೇಕೆಂದರು.

ಡಾ: ರಿಯಾಜ್ ಮಹಮೂದ್ – ಇವರು ಮಾತನಾಡುತ್ತಾ, ಇದು ಕೇವಲ ಸಮಿತಿಯ ನಡಾವಳಿಯಾಗಿದ್ದು, ಬೇರೆಲ್ಲಾ ವಿಶ್ವವಿದ್ಯಾಲಯಗಳಿಂದ ಮಾಹಿತಿ ತರಿಸಿಕೊಂಡು ನಂತರ ಮುಂದಿನ ಕ್ರಮ ಕೈಗೊಳ್ಳಬೇಕಾಗಿದೆಯೆಂದರು.

**ನಿರ್ಣಯ** ದೀರ್ಘ ಚರ್ಚೆಯ ನಂತರ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

1. ಸಮಿತಿಯ ನಡಾವಳಿಯ 3ನೇ ಅಂಶದ ಆರಂಭದಲ್ಲಿ "ಸ್ನಾತಕೋತ್ತರ ಕೋರ್ಸ್‌ಗೆ ಸಂಬಂಧಿಸಿದಂತೆ" ಎಂದು ಸೇರಿಸಿಕೊಳ್ಳಲು ಅನುಮೋದಿಸಿತು.
2. ವಿಳಂಬವಾಗಿ ಸಲ್ಲಿಸುವ ಕಾಲೇಜು/ ಕೋರ್ಸ್ / ವಿಷಯದ ಬದಲಾವಣೆ / ಆಂತರಿಕ ಅಂಕಗಳ ಸೇರ್ಪಡೆ ಪ್ರಸ್ತಾವನೆಗಳಿಗೆ ಸಂಬಂಧಿಸಿದ ಪ್ರತಿ ವಿದ್ಯಾರ್ಥಿಗೆ ರೂ.500/– ಮತ್ತು ಸಂಬಂಧಿಸಿದ ಪ್ರತಿ ಕಾಲೇಜಿಗೆ ರೂ.5000/– ದಂಡ ವಿಧಿಸಲು ನಿರ್ಣಯಿಸಲಾಯಿತು.ಸದರಿ ದಂಡ ವಿಧಿಸುವ ಪ್ರಕ್ರಿಯೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ (2023–24)ಜಾರಿಗೆ ತರಲು ನಿರ್ಣಯಿಸಲಾಯಿತು.

ಉಳಿದಂತೆ ಸಮಿತಿಯ ನಡಾವಳಿಗಳನ್ನು ಯಥಾವತ್ತಾಗಿ ಅನುಮೋದಿಸಲಾಯಿತು.

**ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

**- ಯಾವುದೂ ಇರುವುದಿಲ್ಲ -**

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**-ಯಾವುದೂ ಇರುವುದಿಲ್ಲ -**

**ವಿಷಯ ಸಂಖ್ಯೆ: ಸಿಂ-13:2022-23** **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :**

**1.ಕೇಂದ್ರ ಸರ್ಕಾರದ ಗ್ರಾಮ ಸ್ವರಾಜ್ ಯೋಜನೆಯನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಬಗ್ಗೆ**

ಮಾನ್ಯ ಕುಲಪತಿಗಳು ಮಾತನಾಡುತ್ತಾ, ಕರ್ನಾಟಕ ಗ್ರಾಮೀಣಾಭಿವೃದ್ಧಿ / ಪಂಚಾಯತ್ ರಾಜ್ ವಿಶ್ವವಿದ್ಯಾಲಯದವತಿಯಿಂದ ಹಮ್ಮಿಕೊಳ್ಳಲಾದ ಮಹಾತ್ಮ ಗಾಂಧಿಯವರ ಸದಾಶಯವಾದ ಗ್ರಾಮ ಸ್ವರಾಜ್ ಯೋಜನೆಯನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಬಗ್ಗೆ ಪ್ರಸ್ತಾಪಿಸಿದರು. ಸದರಿ ಯೋಜನೆಯನ್ವಯ ವಿಶ್ವವಿದ್ಯಾಲಯ ವ್ಯಾಪ್ತಿಯ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಒಟ್ಟು 5 ಗ್ರಾಮಗಳನ್ನು ಗುರುತಿಸಿ ಅವುಗಳನ್ನು ದತ್ತು ತೆಗೆದುಕೊಂಡು ಆ ಗ್ರಾಮಗಳ ಮೂಲ ಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವಂತಹ ಸಮಾಜಮುಖಿ ಪ್ರಸ್ತಾವನೆಯನ್ನು ಅನುಮೋದಿಸಲು ಕೋರಿದರು.

ಚರ್ಚೆಯ ನಂತರ ಪ್ರಸ್ತಾಪಿತ ಗ್ರಾಮ ಸ್ವರಾಜ್ ಯೋಜನೆಯನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು. ಹಾಗೂ ಈ ಯೋಜನೆಗಾಗಿ ರೂ.10.00ಲಕ್ಷ ಮೊತ್ತದ ಅನುದಾನವನ್ನು ಮೀಸಲಿಡಲು ನಿರ್ಣಯಿಸಲಾಯಿತು.

ಡಾ: ರಿಯಾಜ್ ಮಹಮೂದ್ ಇವರು ಮಾತನಾಡುತ್ತಾ, ಇದು ತಮ್ಮ ಸಿಂಡಿಕೇಟ್ ಅವಧಿಯ ಕಡೆಯ ಸಭೆಯಾಗಿದ್ದು, ಈ ಅವಧಿಯಲ್ಲಿ ಸಹಕರಿಸಿದ ಎಲ್ಲಾ ಸದಸ್ಯರುಗಳು ಮತ್ತು ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಮಾನ್ಯಕುಲಪತಿಗಳು, ಕುಲಸಚಿವರು ಒಳಗೊಂಡಂತೆ, ಎಲ್ಲಾ ಸದಸ್ಯರುಗಳೂ ಡಾ: ರಿಯಾಜ್ ಮಹಮೂದ್ ಅವರ ಸೇವೆ ಮತ್ತು ಅವರು ಸಿಂಡಿಕೇಟ್ ಅವಧಿಯಲ್ಲಿ ನೀಡಿದ ಅಮೂಲ್ಯ ಸಲಹೆಗಳನ್ನು ಶ್ಲಾಘಿಸಿ ಧನ್ಯವಾದಗಳನ್ನು ಅರ್ಪಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/-
ಕುಲಪತಿಗಳು